ಅಧ್ಯಕ್ಷರು:- ಅವರ ಭಾಷಣವನ್ನು ನೀವೂ ಕೇಳಿದ್ದೀರಿ, ನಾನೂ ಕೇಳಿದ್ದೇನೆ. This question is already withheld.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ದಯವಿಟ್ಟು ತಾವು ಈ ರೀತಿಯ ತೀರ್ಪು ಕೊಟ್ಟರೆ ಬಹಳ ಕಷ್ಟವಾಗುತ್ತದೆ.

MR. SPEAKER:- It will come up next time. I will protect your interests.

(ಗೊಂದಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕುದೂರ್‌ನಲ್ಲಿ ಉಪಖಜಾನೆ ಮಂಜೂರು ಮಾಡುವ ಬಗ್ಗೆ

1639 ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನ ಕುದೂರಿನಲ್ಲಿ ಉಪ ಖಜಾನೆಯನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ.

ಆ) ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಸಚಿವರು)

(ಅ) ಮತ್ತು (ಆ) : ಉಪಖಜಾನೆ ಮಂಜೂರು ಮಾಡುವ ಬಗ್ಗೆ ಇರುವ ನಿಗದಿತ ಸೂತ್ರಗಳ ಪ್ರಕಾರ ಹಾಗೂ ತಾಲ್ಲೂಕು ಕೇಂದ್ರಸ್ಥಾನದಿಂದ ಹೊರಗಡೆ ಉಪ ಖಜಾನೆಯ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಪರಿಶೀಲಿಸಿ, ಮಾಗಡಿ ತಾಲ್ಲೂಕು ಕುದೂರು ಗ್ರಾಮದಲ್ಲಿ ಉಪ ಖಜಾನೆಯನ್ನು ಮಂಜೂರು ಮಾಡುವುದನ್ನು ಪರಿಶೀಲಿಸಲಾಗುವುದು.

ಮಾರಾಟ ತೆರಿಗೆ ಕುರಿತು.

1659 ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿ.ಪಿ.ಎಲ್ ಇಂಡಿಯಾ ಇವರಿಂದ ಕರ್ನಾಟಕ ಸರ್ಕಾರಕ್ಕೆ ಎಷ್ಟು ಮಾರಾಟ ತೆರಿಗೆ ಬರುತ್ತಿದೆ;

ಆ) ಇವರು ಸರ್ಕಾರದಿಂದ ನಿವೇಶನ ಪಡೆದಿದ್ದಾರೆಯೇ ಅಥವಾ ಖಾಸಗಿಯವರಿಂದ ಪಡೆದಿದ್ದಾರೆಯೇ? ಇದರ ಬಗ್ಗೆ ಕೂಲಂಕುಷವಾಗಿ ವಿವರ ನೀಡುವುದು;

ಇ) ಈ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರದ ಸಹಾಯಧನ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು.)

ಅ) ಮೆ:ಬಿ.ಪಿ.ಎಲ್. ಇಂಡಿಯಾ ಇವರಿಂದ ಕಳೆದ ಮೂರು ವರ್ಷಗಳಿಂದ ಬಂದಿರುವ ಮಾರಾಟ ತೆರಿಗೆ ವಿವರ ಈ ಕೆಳಕಂಡಂತಿದೆ;

1987-88 ರೂ 159.02 ಲಕ್ಷಗಳು